## ಬುದ್ಧಿಫೈ

ಇದೊಂದು ಧ್ಯಾನದ ಆ್ಯಪ್. ಆ್ಯಂಡ್ರಾಯ್ಡ್‌ನ ಈ ಆ್ಯಪ್‌ನಲ್ಲಿ 11 ತಾಸುಗಳ ಕಾಲ ಕೇಳುವಷ್ಟು ಧ್ಯಾನದ ಸಂಗೀತವಿದೆ. ಒಟ್ಟು 15 ವಿಭಾಗಗಳನ್ನು ಮಾಡಲಾಗಿದ್ದು, ನಿಮ್ಮ ಭಾವನೆಗಳಿಗೆ ತಕ್ಕಂತೆ ವೈವಿಧ್ಯಮಯ ಧ್ಯಾನ ಸಂಗೀತವನ್ನು ಕೇಳಬಹುದು. ಒತ್ತಡವನ್ನು ಕಡಿಮೆ ಮಾಡಿ ನಿದ್ರಿಸಲು ಸಹಾಯ ಮಾಡುತ್ತದೆ. ಜೀವನದಲ್ಲಿ ಹೆಚ್ಚು ಉತ್ಸಾಹದಿಂದಿರಲು ನೆರವಾಗುತ್ತದೆ. ಇದನ್ನು ಗೂಗ್ಲ್ ಪ್ಲೇ ಸ್ಟೋರ್‌ನಿಂದ ಖರೀದಿಸಬಹುದು.




## ಅಮೆಝಾನ್ ಇನ್‌ಸ್ಟಂಟ್ ವಿಡಿಯೋ

ಐಫೋನ್‌ನ ಈ ಆ್ಯಪ್ ಜಾಹೀರಾತಿನ ಕಿರಿಕಿರಿ ಇಲ್ಲದೆ ಸಿನಿಮಾ, ಟಿವಿ ಕಾರ್ಯಕ್ರಮಗಳ ವಿಡಿಯೋ ವೀಕ್ಷಿಸುವ ಸೌಲಭ್ಯ ನೀಡುತ್ತದೆ. ಅಮೆಝಾನ್‌ನ ಪ್ರಮುಖ ಚಂದಾದಾರರಾಗಿದ್ದರೆ ನಿಮ್ಮ ಫೋನಿಗೆ ಕಡಿಮೆ ಶುಲ್ಕದಲ್ಲಿ ಒಂದು ಲಕ್ಷಕ್ಕಿಂತ ಅಧಿಕ ಸಿನಿಮಾ, ಟಿವಿ ಕಾರ್ಯಕ್ರಮಗಳ ವಿಡಿಯೋ ಬಂದು ಬೀಳುತ್ತದೆ. ಆ್ಯಪ್ ಉಚಿತವಾಗಿದ್ದು, ಡೌನ್‌ಲೋಡ್ ಮಾಡಿಕೊಳ್ಳಬಹುದು. ಯಾವುದೇ ಲಿಂಕ್‌ಗಳ ಗಲಿಬಿಲಿ ಇಲ್ಲದೇ ಸ್ವಚ್ಛ ಪರದೆಯ ಮೇಲೆ ದೊಡ್ಡ ದೊಡ್ಡ ಬಾಕ್ಸ್‌ಗಳಲ್ಲಿ ವಿಡಿಯೋಗಳ ಪಟ್ಟಿ ಕಾಣಿಸಿಕೊಳ್ಳುತ್ತದೆ.




## ಡಾರ್ಕ್ ಸ್ಕೈಸ್

ಐಫೋನ್‌ನ ಈ ಆ್ಯಪ್ ಮಳೆಯ ಮುನ್ಸೂಚನೆ ನೀಡುವುದಲ್ಲದೇ ರಾಡಾರ್ ಅನ್ನು ಹೊಂದಿದ್ದು, ವಿನ್ಯಾಸವೂ ಅಂದವಾಗಿದೆ. ದಟ್ಟ ಕಪ್ಪು ರಂಗಿನ ಅಕ್ಷರಗಳು ಅರೆ ಪಾರದರ್ಶಕ ಪರದೆಯ ಮೇಲೆ ಮೂಡುತ್ತವೆ. ಅದರ ಹಿಂದೆ ರಾಡಾರ್ ಮ್ಯಾಪ್ ಕಾಣಿಸಿಕೊಳ್ಳುತ್ತದೆ. ಮುಖ್ಯ ಪುಟದಲ್ಲಿ ಸದ್ಯದ ಹವಾಮಾನ ಪರಿಸ್ಥಿತಿ, ಉಷ್ಣಾಂಶ ಮೊದಲಾದ ವಿವರಗಳು ಇರುತ್ತವೆ. ಚಾರ್ಟ್‌ನಲ್ಲಿ ನೀಲಿ ಗ್ರಾಫ್ ಇದ್ದು ಉಷ್ಣಾಂಶ ಕುಸಿದು ಮಳೆ ಬೀಳುವ ಸಾಧ್ಯತೆಯ ವಿವರಗಳನ್ನು ಪಡೆಯಬಹುದು. ಈ ಆ್ಯಪ್‌ಗೆ ಶುಲ್ಕ ಪಾವತಿಸಬೇಕಾಗುತ್ತದೆ.







## ಪ್ಲುಟೊ ಸಫಾರಿ

ಐಒಎಸ್‌ನ ಈ ಆ್ಯಪ್ ಪ್ಲುಟೊ ಗ್ರಹದ ಕುರಿತ ಇತ್ತೀಚಿನ ಸುದ್ದಿ ಹಾಗೂ ಚಿತ್ರಗಳನ್ನು ಒದಗಿಸುವುದಲ್ಲದೇ, ನಾಸಾದ ನ್ಯೂ ಹೊರೈಝನ್ ಉಪಗ್ರಹ ಕಳಿಸುವ ಬಹುತೇಕ ಮಾಹಿತಿಗಳನ್ನು ನೀಡುತ್ತದೆ. ಈ ಚಿಕ್ಕದಾದ, ಹಿಮದಿಂದ ಕೂಡಿದ ಗ್ರಹ ಕುತೂಹಲಕಾರಿಯಾಗಿದ್ದು, ಆಕಾಶಕಾಯಗಳ ಕುರಿತು ಆಸಕ್ತಿ ಇರುವವರು ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆ್ಯಪಲ್ ಐಫೋನ್, ಐಪ್ಯಾಡ್, ಐಪಾಡ್ ಆವೃತ್ತಿಗಳಿದ್ದು, ಆ್ಯಪಲ್ ವಾಚ್‌ಗೂ ಪ್ರತ್ಯೇಕ ಆ್ಯಪ್ ಇದೆ.

■ ಎಸ್. ತುಂಬೆ